**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿಸಿ ಸಂಖ್ಯೆ 199/2020**

ಪಿರ್ಯಾದುದಾರರು : ಕರ್ನಾಟಕ ಸರಕಾರದ ಪರವಾಗಿ ತಿ.ನರಸೀಪುರ
ಪೊಲೀಸ ಠಾಣೆ, ತಿ. ನರಸೀಪುರ.

ವಿರುದ್ಧ

ಆರೋಪಿತರು : ಅಮಿತ್ ಉಃ ರಾಜೇಂದ್ರ ಪ್ರಸಾದ್ ಸಿ
ಬಿನ್ ಚಂದ್ರು ಆರ್,
ವಯಸ್ಸು 19 ವರ್ಷ,
ವಾಸ ತ್ರಿವೇಣಿ ನಗರ, ತಿ. ನರಸೀಪುರ ಪಟ್ಟಣ,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯೇ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತನ ವಿಚಾರಣೆ**

ಪ್ರಶ್ನೆಃ 1. ನ್ಯಾಯಾಲಯದಲ್ಲಿ ಅಭಿಯೋಜನೆಯ ಸಾಕ್ಷಿಯು ನುಡಿದಿರುವ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ ಹೌದು.

ಪ್ರಶ್ನೆಃ 2. ಫ್ರಾಸಾ-2/ನಂಜುಂಡ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.01.2019 ರಂದು ನನ್ನನ್ನು ಸ್ವಚ್ಚತೆ ಕೆಲಸ ಮಾಡುವಂತೆ ತಿ. ನರಸೀಪುರ ತ್ರಿವೇಣಿ ನಗರದ ವಾರ್ಡ ಸಂಖ್ಯೆ 5 ಕ್ಕೆ ನೇಮಕ ಮಾಡಿದ್ದು, ಆ ದಿನ ಬೆಳಗ್ಗೆ 6.00 ಗಂಟೆಗೆ ತಾನು ಆ ಕೆಲಸ ಮಾಡಲು ಹೋಗಿದ್ದು,

ಬೆಳಗ್ಗೆ ಸುಮಾರು 9 ಗಂಟೆಗೆ ತಾನು ಆರೋಪಿತರಾದ ನಿಮ್ಮ ಮನೆಯ ಮುಂದಿನ ಮೋರಿಯನ್ನು ಸ್ವಚ್ಛಗೋಳಿಸಿ ಹೋಗುತ್ತಿದ್ದಾಗ, ನೀವು ತನ್ನನ್ನು ಉದ್ದೇಶಿಸಿ, ಮೋರಿಯಲ್ಲಿರುವ ಕಸವನ್ನು ತೆಗೆದ ನೀರು ನಿಮ್ಮ ಮನೆಯ ಮುಂದೆ ಬಂದಿದೆ ಎಂದು, ಆ ರೀತಿ ನಿಮ್ಮ ಮನೆಯ ಮುಂದೆ ಯಾಕೆ ಕಸವನ್ನು ತೆಗೆದು ಚೆಲ್ಲಿದ್ದೀಯಾ, ಬೋಳಿ ಮಗನೇ ಎಂದು, ಅದರಿಂದ ನಿಮ್ಮ ಮನೆಯ ಮುಂದೆ ನೀರು ಬಂದಿದೆ ಎಂದು ನೀವು ತನ್ನ ಜೊತೆ ಜಗಳ ಆಡಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 3. ಪ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನಿಮ್ಮನ್ನು ತಾನು ಕೇಳಿದ್ದಕ್ಕೆ, ನೀವು ತನ್ನ ಜೊತೆಗೆ ಗಲಾಟೆಗಿಳಿದು ತನ್ನನ್ನು ಅಡ್ಡಗಟ್ಟಿ, ನೆಲಕ್ಕೆ ಕೆಡವಿ, ಕೈಗಳಿಂದ ತನ್ನ ಮುಖಕ್ಕೆ ಪರಚಿ, ತನ್ನ ಬಟ್ಟೆಗಳನ್ನು ಕೂಡ ಹರಿದು ಹಾಕಿದ್ದು, ಪ್ರಾಸಾ–3/ ಮಹದೇವ ಮತ್ತು ಪ್ರಾಸಾ–4/ಶಿವಣ್ಣರವರು ಗಲಾಟೆಯನ್ನು ಬಿಡಿಸಿದರು ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 4. ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ತಿ ನರಸೀಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು, ಘಟನೆಯನ್ನು ತನ್ನ ಆರೋಗ್ಯಾಧಿಕಾರಿ ಮತ್ತು ಮುಖ್ಯಾಧಿಕಾರಿಯವರಿಗೆ ತಿಳಿಸಿರುತ್ತೇನೆ ಎಂದು, ನಂತರ ತಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 5. ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಘಟನೆಯಾದ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು, ಅವರಿಗೆ ಫ್ರಾಸಾ–3 ಮತ್ತು 4 ರವರು ಘಟನಾ ಸ್ಥಳವನ್ನು ತೋರಿಸಿದ್ದು, ಅವರು ಸ್ಥಳದಲ್ಲಿ ವಿಚಾರಣೆ ಮಾಡಿ, ಪಂಚನಾಮವನ್ನು ಜರುಗಿಸಿದರು ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 6. ಫ್ರಾಸಾ–3/ಮಹದೇವ ಮತ್ತು ಫ್ರಾಸಾ–4/ಶಿವಣ್ಣ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.01.2019 ರಂದು ತಮ್ಮನ್ನು ಮತ್ತು ಫ್ರಾಸಾ–1 ರವರನ್ನು ಸ್ವಚ್ಛತೆ ಕೆಲಸ ಮಾಡುವಂತೆ ತಿ. ನರಸೀಪುರ ತ್ರಿವೇಣಿ ನಗರದ ವಾರ್ಡ ಸಂಖ್ಯೆ 5 ಕ್ಕೆ ನೇಮಕ ಮಾಡಿದ್ದು, ಆ ಪ್ರಕಾರ ತಾವು ಆ ದಿನ ಬೆಳಿಗ್ಗೆ 6.00 ಗಂಟೆಗೆ ಆ ಕೆಲಸಕ್ಕೆ ಹೋಗಿ, ಅಕ್ಕಪಕ್ಕದ ಮೋರಿಗಳನ್ನು ಸ್ವಚ್ಛ

ಮಾಡುತ್ತಿದ್ದು, ಸುಮಾರು ಬೆಳಿಗ್ಗೆ 8.45 ಅಥವಾ 9.00 ಗಂಟೆ ಸುಮಾರಿಗೆ ಆರೋಪಿತರಾದ ನೀವು ಫ್ರಾಸಾ-1 ರವರ ಜೊತೆಗೆ ಗಲಾಟೆ ಮಾಡಿ ಅವರಿಗೆ ಹೊಡೆಯುತ್ತಿದ್ದಾರೆ ಎಂದು ಒಬ್ಬ ಸಾರ್ವಜನಿಕರು ತಮಗೆ ತಿಳಿಸಿದರು ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 7. ಫ್ರಾಸಾ-3 ಮತ್ತು 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಘಟನಾ ಸ್ಥಳಕ್ಕೆ ಹೋಗಿದ್ದು, ಆರೋಪಿತರಾದ ನೀವು ಫ್ರಾಸಾ-1 ರವರನ್ನು ಅಡ್ಡಗಟ್ಟಿ ನಿಲ್ಲಿಸಿ, ಅವರ ಬಟ್ಟೆಯನ್ನು ಹಿಡಿದು ಎಳೆದಾಡಿ, ಹರಿದು ಹಾಕಿ, ಅವರ ಮುಖವನ್ನು ಪರಚಿ, ಅವರಿಗೆ "ಬೋಳಿ ಮಗನೇ, ಸೂಳೇ ಮಗನೇ" ಎಂದು ಬೈದು ನಿಮ್ಮ ಕೈಗಳಿಂದ ಅವರಿಗೆ ಹೊಡೆದಿರುತ್ತೀರಿ ಎಂದು ಮತ್ತು ತಾವು ಗಲಾಟೆಯನ್ನು ಬಿಡಿಸಿರುತ್ತೇವೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 8. ಫ್ರಾಸಾ-3 ಮತ್ತು 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಘಟನೆಯ ವಿಷಯವನ್ನು ತಿ. ನರಸೀಪುರ ಪುರಸಭೆಯ ಮುಖ್ಯಾಧಿಕಾರಿಗೆ ಕರೆ ಮಾಡಿ ತಿಳಿಸಿದ್ದು, ಪುರಸಭೆಯ ಆರೋಗ್ಯಾಧಿಕಾರಿ ಸ್ಥಳಕ್ಕೆ ಬಂದಿದ್ದು, ನಂತರ ಫ್ರಾಸಾ-1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದು, ಆನಂತರ ಪೋಲಿಸ್ ಠಾಣೆಗೆ ಕರೆದು ಕೊಂಡು

ಹೋಗಿರುತ್ತೇವೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 9. ಫ್ರಾಸಾ-3 ಮತ್ತು 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮೋರಿಯನ್ನು ಸ್ವಚ್ಛತೆ ಮಾಡುವಾಗ ಮೋರಿಯ ನೀರು ಆರೋಪಿತರ ನಿಮ್ಮ ಮನೆಯ ಮುಂದೆ ಚೆಲ್ಲಿದ ಕಾರಣ ನೀವು ಗಲಾಟೆ ಮಾಡಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 10. ಫ್ರಾಸಾ-3 ಮತ್ತು 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಘಟನೆಯಾದ ದಿನ ಮಧ್ಯಾಹ್ನ 1 ಗಂಟೆ ಸುಮಾರಿಗೆ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು, ಅವರಿಗೆ ಫ್ರಾಸಾ-2 ಮತ್ತು ತಾವು ಘಟನಾ ಸ್ಥಳವನ್ನು ತೋರಿಸಿದ್ದು, ಅವರು ಪಂಚನಾಮವನ್ನು ಮಧ್ಯಾಹ್ನ 1.00 ರಿಂದ 1.30 ಗಂಟೆಯವರೆಗೆ ಸಿದ್ದಪಡಿಸಿರುತ್ತಾರೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆಃ 11. ಫ್ರಾಸಾ-1/ಚೇತನ್‌ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.01.2019 ರಂದು ಫ್ರಾಸಾ-1 ರವರನ್ನು ತಿ. ನರಸೀಪುರದ ತ್ರಿವೇಣಿ ನಗರದ ವಾರ್ಡ ಸಂಖ್ಯೆ

5 ಕ್ಕೆ ಸ್ವಚ್ಛತೆ ಕೆಲಸ ಮಾಡುವಂತೆ ನೇಮಕ ಮಾಡಿದ್ದು, ಆ ದಿನ ಅವರು ಚರಂಡಿಯ ಹೂಳೆತ್ತುವಾಗ, ಆರೋಪಿತರಾದ ನೀವು ನಿಮ್ಮ ಮನೆಯ ಮುಂದೆ ಕಸವನ್ನು ಹಾಕಬಾರದು ಎಂದು ಮತ್ತು ಆ ರೀತಿ ಹಾಕಿದರೆ ನಿಮ್ಮ ಮನೆಯ ಮುಂದೆ ಗಲೀಜು ಆಗುತ್ತದೆ ಎಂದು ಹೇಳಿ ಫ್ರಾಸಾ–1 ರವರೊಂದಿಗೆ ಜಗಳ ಮಾಡಿ, ಅವರ ಮುಖ ಮತ್ತು ಎದೆಯನ್ನು ಪರಚಿ, ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತೀರಿ ಎಂದು ಮತ್ತು ಘಟನೆಯ ವಿಷಯ ತನಗೆ ತಿಳಿದ ನಂತರ ತಾನು ಫ್ರಾಸಾ–1 ರವರನ್ನು ಚಿಕಿತ್ಸೆಗಾಗಿ ತಿ. ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 12. ಫ್ರಾಸಾ–6/ಮಹೇಂದ್ರ ಎಂ ರವರು ತಮ್ಮ ಸಾಕ್ಷ್ಯದಲ್ಲಿ, ಫ್ರಾಸಾ–2 ರವರು ಪುರಸಭೆಯಲ್ಲಿ ಪೌರಕಾರ್ಮಿಕರಾಗಿದ್ದು, ಅವರನ್ನು 2019 ರ ಜನವರಿ ತಿಂಗಳಿನ ಒಂದು ದಿನದಂದು ತಿ. ನರಸೀಪುರ ಪಟ್ಟಣದ 5 ನೇ ವಾರ್ಡಿನ ತ್ರಿವೇಣಿ ನಗರದ ರಾಜರಾಜೇಶ್ವರಿ ಮೆಡಿಕಲ್ ಅಂಗಡಿಯ ಬಳಿ ಚರಂಡಿಯನ್ನು ಸ್ವಚ್ಛಗೊಳಿಸಲು ನಿಯೋಜಿಸಿದ್ದೇವು ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 13. ಪ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪ್ರಾಸಾ–2 ರವರು ಚರಂಡಿಯನ್ನು ಸ್ವಚ್ಛಗೊಳಿಸಿ ಕಸವನ್ನು ತೆಗೆದು ಹಾಕುತ್ತಿರುವಾಗ, ಅದರ ಕಲುಷಿತ ನೀರು ಆರೋಪಿತರಾದ ನಿಮ್ಮ ಮನೆಯ ಮುಂದೆ ಬಿದ್ದಿದ್ದರಿಂದ ನಿಮ್ಮ ತಾಯಿ ಪ್ರಾಸಾ–2 ರವರಿಗೆ ಆ ಬಗ್ಗೆ ವಿಚಾರಿಸಿ ನಿಮ್ಮ ಮನೆಯ ಮುಂದೆ ಆ ನೀರನ್ನು ಹಾಕದಂತೆ ಹೇಳಿದ್ದು, ನಂತರ ಪ್ರಾಸಾ–2 ರವರು ನಿಮ್ಮ ತಾಯಿಗೆ ಆ ನೀರು ಸ್ವಲ್ಪ ಸಮಯದ ನಂತರ ಒಣಗಿ ಹೋಗುತ್ತದೆ ಎಂದು ಹೇಳಿದ್ದು, ಅದಕ್ಕೆ ನೀವು ಪ್ರಾಸಾ–2 ರವರನ್ನು ಉದ್ದೇಶಿಸಿ ನಿಮ್ಮ ತಾಯಿಗೆ ಹಿಂತಿರುಗಿ ಮಾತನಾಡುತ್ತೀಯಾ ಎಂದು ಏಕಾಏಕಿ ಪ್ರಾಸಾ–2 ರವರ ಮೇಲೆ ಹೊಡೆದು ಅವರ ಮೈಮೇಲೆ ಉಗುರಿನಿಂದ ಪರಚಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 14. ಪ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪ್ರಾಸಾ–4 ರವರು ತನಗೆ ದೂರವಾಣಿ ಕರೆ ಮಾಡಿ ಘಟನೆಯ ಬಗ್ಗೆ ತಿಳಿಸಿದ್ದು, ತಾನು ಪ್ರಾಸಾ–2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಪ್ರಾಸಾ–4 ರವರಿಗೆ ತಿಳಿಸಿದ್ದು, ನಂತರ ತಾನು ಆಸ್ಪತ್ರೆಗೆ ಹೋಗಿ ಪ್ರಾಸಾ–2 ರವರಿಗೆ ಚಿಕಿತ್ಸೆಯನ್ನು ಕೊಡಿಸಿದ್ದು, ಆನಂತರ ತಾನು, ಪುರಸಭೆಯ ಮುಖ್ಯಾಧಿಕಾರಿ, ಆರೋಗ್ಯ ನೀರಿಕ್ಷಕರು ಮತ್ತು ಪ್ರಾಸಾ–2 ರವರು ಸೇರಿ ಪೊಲೀಸ್ ಠಾಣೆಗೆ ದೂರು

ನೀಡಿರುತ್ತೇವೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 15. ಫ್ರಾಸಾ-7/ಡಾ. ನವೀನ್ ಎಸ್ ಬಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.01.2019 ರಂದು ಬೆಳಗ್ಗೆ 9.40 ಗಂಟೆಗೆ ಫ್ರಾಸಾ-2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ತನ್ನ ಬಳಿ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಅವರ ಎಡಗಣ್ಣಿನ ಕೆಳ ಭಾಗದಲ್ಲಿ 1 x 2 ಸೇ ಮಿ ಅಳತೆಯ ತರಚಿದ ಗಾಯ, ಅವರ ಬಲಗಣ್ಣಿನ ಮೇಲೆ 0.5 x 1 ಸೇ ಮಿ ಅಳತೆಯ ತರಚಿದ ಗಾಯ ಮತ್ತು ಬಲಭಾಗದ ಎದೆಯ ಮೇಲೆ 10 ಸೇ ಮಿ ಅಳತೆಯ ಉದ್ದದ ತರಚಿದ ಗಾಯ ಕಂಡು ಬಂದವು ಎಂದು, ಅವರಿಗೆ ಚಿಕಿತ್ಸೆ ನೀಡಿರುತ್ತೇನೆ ಎಂದು, ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಅವುಗಳು ಕೈಯಿಂದ ಹೊಡೆದರೆ ಮತ್ತು ಕೈನ ಉಗುರುಗಳಿಂದ ಪರಚಿದರೆ ಆಗಬಹುದು ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 16. ಫ್ರಾಸಾ-5/ಅಜರುದ್ದೀನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.01.2019 ರಂದು ಮಧ್ಯಾಹ್ನ 12.15 ಘಂಟೆಗೆ ತಾನು ಠಾಣಾಧಿಕಾರಿಯಾಗಿದ್ದಾಗ ಫ್ರಾಸಾ-2 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿದ್ದು, ಅದರ ಮೇಲೆ ಅಪರಾಧ

ಸಂಖ್ಯೆ 5/2019 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 17. ಪ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪ್ರಾಸಾ–2 ರವರು ತೋರಿಸಿದಂತೆ ಪ್ರಾಸಾ–3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 1.00 ರಿಂದ 1–45 ಗಂಟೆ ಸಮಯದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು.

ಪ್ರಶ್ನೆ : 18. ಪ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆರೋಪಿತರಾದ ನಿಮ್ಮನ್ನು ದಸ್ತಗಿರಿ ಮಾಡಿ ಹಾಜರು ಪಡಿಸುವಂತೆ ಠಾಣಾ ಸಿಬ್ಬಂದಿಗಳಾದ ಮಂಚಯ್ಯ ಮತ್ತು ಪಚ್ಚೇಗೌಡರವರನ್ನು ಮೌಖಿಕವಾಗಿ ನೇಮಿಸಿದ್ದು, ಅವರು ನಿಮ್ಮನ್ನು ದಸ್ತಗಿರಿ ಮಾಡಿ ಅದೇ ದಿನ ಮಧ್ಯಾಹ್ನ 3.15 ಗಂಟೆಗೆ ತನ್ನ ಮುಂದೆ ಹಾಜರು ಪಡಿಸಿದ್ದು, ನಿಮ್ಮನ್ನು ವಿಚಾರಿಸಿದ್ದು, ನೀವು ನಿಮ್ಮ ತಪ್ಪನ್ನು ಒಪ್ಪಿದ್ದು, ನಿಮ್ಮನ್ನು ನ್ಯಾಯಾಂಗ ಬಂಧನಕ್ಕಾಗಿ

ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು.

ಪ್ರಶ್ನೆ : 19. ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಫ್ರಾಸಾ–1, 3 ಮತ್ತು 4 ರವರ ಹೇಳಿಕೆಗಳನ್ನು ಮತ್ತು ಫ್ರಾಸಾ–2 ರವರ ಮರು ಹೇಳಿಕೆ ಪಡೆದು ಕೊಂಡಿರುತ್ತೇನೆ ಎಂದು, ದಿನಾಂಕ 14.02.2019 ರಂದು ಫ್ರಾಸಾ–2 ರವರ ಗಾಯದ ಪ್ರಮಾಣ ಪತ್ರವನ್ನು ತಿ. ನರಸೀಪುರ ಸರ್ಕಾರಿ ಆಸ್ಪತ್ರೆಯಿಂದ ಪಡೆದು ಕೊಂಡಿರುತ್ತೇನೆ ಎಂದು, ಫ್ರಾಸಾ–2 ರವರನ್ನು ಪೌರಕಾರ್ಮಿಕ ಎಂದು ನೇಮಿಸಿರುವ ಬಗ್ಗೆ ತಿ. ನರಸೀಪುರ ಪುರಸಭೆಯಿಂದ ಆದೇಶದ ಪ್ರತಿಗಳು ಮತ್ತು ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಮತ್ತು ತನಿಖೆ ಪೂರ್ಣ ಗೊಂಡ ನಂತರ ಆರೋಪಿತರಾದ ನಿಮ್ಮ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರ : ಸುಳ್ಳು

ಪ್ರಶ್ನೆ : 20. ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ – ಇಲ್ಲ.

ಪ್ರಶ್ನೆಃ 21. ನೀವು ಸಾಕ್ಷಿ ವಿಚಾರಣೆ ಮಾಡಬಯಸುತ್ತೀರಾ?

ಉತ್ತರಃ – ಇಲ್ಲ.

(ಆರೋಪಿತರ ಹೇಳಿಕೆಯನ್ನು ಸ್ವತಃ ನಾನೇ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢೀಕರಿಸುತ್ತೇನೆ.)

ದಿನಾಂಕಃ 22.11.2024

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ.ನರಸೀಪುರ**